ಬೆಳಕಿನಲ್ಲಿ ಪ್ರಾಕ್ತನ ಸಿದ್ಧಾಂತಗಳ ಸತ್ವ ಮತ್ತು ಮಹತ್ವಗಳನ್ನು ತಿಳಿದುಕೊಂಡು, ಅದನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿ ಕೊಂಡರೆ, ಬದುಕಿಗೊಂದು ಸಾರ್ಥಕತೆ ಬಂದೀತು ಎಂಬುದನ್ನು ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನ ದುರ್ಲಭ ಎನ್ನುವಷ್ಟು ವಿರಳ.

ಇಂದು ಭಾರತೀಯರ ಯೋಗ, ತತ್ತ್ವಚಿಂತನೆ, ಸಂಗೀತ ಮತ್ತು ಕಲೆ– ಇವು ಇತರ ದೇಶದ ಮನಸ್ಸನ್ನು ಏಕೆ ಸೆಳೆಯುತ್ತವೆ? ಕೇವಲ ಹೊಸತನದ ಕ್ಷಣಿಕ ಕುತೂಹಲ, ಉದ್ವೇಗಕ್ಕಾಗಿ ಮಾತ್ರ ಅಲ್ಲ. ಈ ದೇಶದ ಪುರಾತನ ಋಷಿಗಳು ಮನಸ್ಸಿನ ಆಳಕ್ಕೆ ಮುಳುಗಿ, ಜೀವನದ ಅರ್ಥ ಉದ್ದೇಶಗಳನ್ನು ಕಂಡುಕೊಂಡರು. ಜನತೆಗೆ ಕೆಲವೊಂದು ಶಾಶ್ವತ ಮೌಲ್ಯಗಳನ್ನು ನೀಡಿದರು. ವಿಜ್ಞಾನದ ಪ್ರಗತಿಯ ದೇಶಗಳಲ್ಲಿ ಮನಸ್ಸಿನ ಆಳಕ್ಕೆ ಮುಳುಗಿ ಅದರ ರಹಸ್ಯವನ್ನು ಕಂಡು ಹಿಡಿಯುವ ಪ್ರಯತ್ನ ನಡೆದಿದೆ.

ಮ್ಯಾಕ್ಸ್‌ಮುಲ್ಲರ್ ಅವರ ಅಭಿಪ್ರಾಯದಂತೆ ಯೋಗಶಾಸ್ತ್ರಕ್ಕೆ ಸುಮಾರು ಆರು ಸಾವಿರ ವರ್ಷಗಳ ಇತಿಹಾಸವಿದೆ. ಗೌತಮನು ಬುದ್ಧನಾಗುವ ಮೊದಲು ಅರಣ್ಯಗಳಲ್ಲಿ ಅಲೆಯುತ್ತಿರುವಾಗ ಅಸಂಖ್ಯ ಸಾಧಕ ತಪಸ್ವಿಗಳನ್ನು ಕಂಡ ವಿಚಾರವೂ ತಿಳಿದುಬಂದಿದೆ.

ನಮ್ಮ ಭಾರತೀಯ ತತ್ತ್ವಶಾಸ್ತ್ರಜ್ಞರು ಅನುಸರಿಸಿದ ಸತ್ಯಾನ್ವೇಷಣೆಯ ಕ್ರಮ – ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಎಂಬ ಮೂರು ಬಗೆಯ ಪ್ರಮಾಣಗಳು.

ಪರಮ ಸಾಕ್ಷಾತ್ಕಾರದ ಸಾಧನೆಯಲ್ಲಿ ಆಪ್ತವಾಕ್ಯ ಅಥವಾ ಶಬ್ದಪ್ರಮಾಣ, ಯುಕ್ತಿ ಅಥವಾ ತರ್ಕದ ಮೂಲಕ ವಿಚಾರದ ಒರೆಗಲ್ಲಿನಲ್ಲಿ ವಿಮರ್ಶಿಸುವ ವಿಧಾನ ಮತ್ತು ಸ್ವಂತ ಬದುಕಿನಲ್ಲಿ ಆ ಅನುಭವ – ಈ ಮೂರೂ ವಿಧಾನಗಳು ಸೇರಿ ಕೊಂಡಿವೆ. ಯುಕ್ತಿ–ತರ್ಕಗಳನ್ನು, ಸ್ವಾನುಭವವನ್ನು ಬಿಟ್ಟು ಕೇವಲ ಶಬ್ದಪ್ರಮಾಣವನ್ನೇ ಅಧ್ಯಯನ ಮಾಡುವ ವ್ಯಕ್ತಿ ಮತಾಂಧನಾಗುವ ಸಂಭವವಿದೆ.

ಪಾಶ್ಚಾತ್ಯ ಸಂಸ್ಕೃತಿ ಮತ್ತು ಸಮಾಜ ಉಳಿಯಬೇಕಾದರೆ ಕರ್ಮಸಿದ್ಧಾಂತದ ಅರಿವನ್ನು ಅಲ್ಲಿಯ ಜನಮಾನಸದಲ್ಲಿ ಪ್ರಚಾರಗೊಳಿಸಬೇಕೆಂದು ಲೇಖಕ ಪಾಲ್ ಬ್ರಂಟನ್ ಒಮ್ಮೆ ಹೇಳಿದ್ದ. ಚರ್ಚ್ ಹಾಗೂ ಕ್ರೈಸ್ತ ಧರ್ಮಾಧಿಕಾರಿಗಳೆಲ್ಲ ಕರ್ಮ ಸಿದ್ಧಾಂತವನ್ನು ಮೂಢ ನಂಬಿಕೆ ಎಂದು ವಿರೋಧಿಸಿದ್ದರೂ, ಒಂದು ಅಂದಾಜಿನ ಪ್ರಕಾರ ಅಮೇರಿಕಾ ದೇಶದ ನಾಲ್ವರಲ್ಲಿ ಒಬ್ಬರು ಈ ಸಿದ್ಧಾಂತವನ್ನು ಒಪ್ಪುತ್ತಾರೆ.

ಬ್ರಿಟನ್ನಿನ ಸಂಡೇ ಟೆಲಿಗ್ರಾಫ್ ಪತ್ರಿಕೆ ನಡೆಸಿದ ಅಧ್ಯಯನದ ಪ್ರಕಾರ, ಕಳೆದ ಹತ್ತು ವರ್ಷಗಳಲ್ಲಿ ಜನಸಾಮಾನ್ಯರ ನಂಬಿಕೆಯ ಪ್ರಮಾಣ (ಕರ್ಮ ಹಾಗೂ ಜನ್ಮಾಂತರ ಸಿದ್ಧಾಂತಗಳ ಬಗ್ಗೆ) ಶೇಕಡಾ ಹದಿನೆಂಟರಿಂದ ಇಪ್ಪತ್ತೆಂಟಕ್ಕೆ ಏರಿದೆಯಂತೆ.

ಕ್ರೈಸ್ತಮತದ ಯುನಿಟೇರಿಯನ್ ಪಂಥಕ್ಕೆ ಸೇರಿದ ಧರ್ಮಗುರು ವಿಲಿಯಂ ಆರ್ ಅಲ್‌ಗರ್ ಎಂಬವರು ಕರ್ಮಸಿದ್ಧಾಂತ ಹಾಗೂ ಜನ್ಮಾಂತರವಾದವನ್ನು ತಲೆಬುಡವಿಲ್ಲದ ಸಿದ್ಧಾಂತವೆಂದು ಪ್ರತಿಪಾದಿಸಲು ಹೊರಟು, ಅದರ ಬಗ್ಗೆ ಅಧ್ಯಯನ ಮಾಡುತ್ತ ತಮ್ಮ ಇಡೀ ಜೀವನವನ್ನೇ ಅದಕ್ಕಾಗಿ ಸವೆಸಿದರಂತೆ. ಕೊನೆಗೆ ಆದದ್ದೇ ಬೇರೆ– ಅವರು ಆ ಸಿದ್ಧಾಂತದ ಪ್ರತಿಪಾದಕರೇ ಆದರಂತೆ. ಅವರ ಉದ್ಗ್ರಂಥ 'ಭವಿಷ್ಯ ಜೀವನದ ವಿಮರ್ಶಾತ್ಮಕ ಇತಿಹಾಸ' ಉನ್ನತ ಮಟ್ಟದ ಪಾಂಡಿತ್ಯಕ್ಕೆ ಅದ್ವಿತೀಯ ಮಾದರಿ ಎಂದು ಹೊಗಳಲ್ಪಟ್ಟ ಗ್ರಂಥ. 'ಕರ್ಮ, ಜನ್ಮಾಂತರ ಇವು ಯುಕ್ತಿಯುಕ್ತವಾದ ಅದ್ಭುತ ಸಿದ್ಧಾಂತ. ಅದನ್ನು ಮೂಢನಂಬಿಕೆ ಎಂದು ಅಲ್ಲಗಳೆಯುವುದು ಮೂರ್ಖತನ' ಎಂದು ಅವರು ಹೇಳಿದ್ದಾರೆ. ✱


## ಹುಟ್ಟು–ಸಾವನ್ನು ಮೀರಿದ ಸಂಬಂಧ



೧೮೮೬ ರಲ್ಲಿ ಸುರೇಶಚಂದ್ರ ದತ್ತನೆಂಬ ಭಕ್ತನೊಬ್ಬ, ಶ್ರೀರಾಮಕೃಷ್ಣರಿಂದ ದೀಕ್ಷೆ ಪಡೆಯುವ ಸಲುವಾಗಿ ಆಗ ಅವರು ವಾಸವಾಗಿದ್ದ ಕಾಶೀಪುರದ ಉದ್ಯಾನ ಮನೆಗೆ ಬಂದಿದ್ದ. ಆದರೆ ಶ್ರೀರಾಮಕೃಷ್ಣರ ಆರೋಗ್ಯ ತುಂಬಾ ಕೆಟ್ಟಿದ್ದುದನ್ನು ಕಂಡು, ಅವನು ಅವರ ಬಳಿ ದೀಕ್ಷೆಗಾಗಿ ಪ್ರಾರ್ಥಿಸಿಕೊಳ್ಳಲಿಲ್ಲ. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವನಿಗೆ ಅತ್ಯಂತ ದುಃಖ, ಪಶ್ಚಾತ್ತಾಪಗಳುಂಟಾದವು. ಅವನು ರಾತ್ರಿ ಹೊತ್ತನ್ನು ಗಂಗಾನದಿಯ ತೀರದಲ್ಲಿ ಪ್ರಾರ್ಥಿಸುತ್ತ, ಧ್ಯಾನಿಸುತ್ತ ಕಳೆಯತೊಡಗಿದ. ಒಂದು ರಾತ್ರಿ ಅವನು ಗಂಗಾತೀರದಲ್ಲಿ ಅಳುತ್ತ, ಪ್ರಾರ್ಥನೆ ಮಾಡಿಕೊಂಡು ಮಲಗಿ ನಿದ್ರಿಸಿಬಿಟ್ಟಿದ್ದ. ಮುಂಜಾನೆ ಏಳುತ್ತಲೇ ನೋಡುತ್ತಾನೆ, ಶ್ರೀರಾಮಕೃಷ್ಣರು ತಮ್ಮ ದೇದೀಪ್ಯಮಾನವಾದ ಶರೀರದೊಂದಿಗೆ ನೀರಿನಿಂದೆದ್ದು ಬರುತ್ತಿದ್ದಾರೆ! ಅವನ ಬಳಿಗೆ ಬಂದ ಅವರು, ಅವನ ಕಿವಿಯಲ್ಲಿ ಮಂತ್ರವೊಂದನ್ನು ಹೇಳಿಬಿಟ್ಟರು. ಇನ್ನೇನು, ಸುರೇಶಚಂದ್ರ ಅವರ ಪಾದಗಳಿಗೆ ನಮಸ್ಕರಿಸಿ, ಅವರ ಪಾದಧೂಳಿಯನ್ನು ತೆಗೆದುಕೊಳ್ಳುವಷ್ಟರಲ್ಲಿ ಶ್ರೀರಾಮಕೃಷ್ಣರು ಮರೆಯಾಗಿಬಿಟ್ಟರು. ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದ ನಂತರವೂ ಈ ರೀತಿ ಭಕ್ತರಿಗೆ ಮಂತ್ರದೀಕ್ಷೆ ನೀಡಿದ್ದಿದೆ.

*Sri Ramakrishna Saves'* ಗ್ರಂಥದಿಂದ

# ಶ್ರೀಮದ್ಭಾಗವತ ಸಾರ



ಎ. ಮುರಳೀಧರ

## ದಶಮ ಸ್ಕಂಧ

### ಭಾಗ–೨

## ಶ್ರೀಕೃಷ್ಣಲೀಲೆ ಮತ್ತು ಕಂಸವಧೆ

**ಶ್ರೀಕೃಷ್ಣ ಮಣ್ಣು ತಿಂದಾಗ:** ಗೋಪಾಲಕರನ್ನು ಕರೆದುಕೊಂಡು ಕೃಷ್ಣ ಬಲರಾಮರು ಹೊರಗಡೆ ಆಟವಾಡುತ್ತಿದ್ದರು. ಓರ್ವ ಬಾಲಕನು ಯಶೋದೆಯ ಮನೆಗೆ ಬಂದು, "ಅಮ್ಮ, ನಿನ್ನ ಮಗ ಕೃಷ್ಣ ಮಣ್ಣು ತಿಂದ" ಎಂದನು. ಕೂಡಲೇ ಹೊರಟ ಯಶೋದೆಯು ಮಗನಾಡುತ್ತಿದ್ದ ಜಾಗಕ್ಕೆ ಬಂದಳು. ಕೃಷ್ಣನ ರಟ್ಟೆಯನ್ನು ಹಿಡಿದು, "ಮಣ್ಣು ತಿಂದೆಯಾ ಮೂರ್ಖ!" ಎಂದು ಬೈದಳು. ಪಕ್ಕದಲ್ಲಿದ್ದ ಬಲರಾಮ, "ಹೌದು, ಕೃಷ್ಣ ಮಣ್ಣನ್ನು ತಿಂದ" ಎಂದು ಹೇಳಿದನು. ಕೋಪಗೊಂಡ ಯಶೋದೆಯು ಕೃಷ್ಣನನ್ನು ಹೊಡೆಯಲು ಕೈ ಎತ್ತಿದಳು. "ಇಲ್ಲ, ನಾನು ಮಣ್ಣು ತಿನ್ನಲಿಲ್ಲ; ಅಮ್ಮ, ಇವರೆಲ್ಲ ಸುಳ್ಳು ಹೇಳುತ್ತಿದ್ದಾರೆ" ಎಂದು ಅಮಾಯಕ ನಂತೆ ಹೇಳಿದ ಕೃಷ್ಣ. ಅವನ ಮಾತಿಗೆ ಯಶೋದೆ, "ಹಾಗಾದರೆ ಬಾಯನ್ನು ತೆರೆದು ತೋರಿಸು" ಎಂದು ಗದರಿಸಿದಳು. ಕೃಷ್ಣನು ಬಾಯಿ ತೆರೆದು ಅಮ್ಮನ ಮುಂದೆ ನಿಂತನು. ಕೃಷ್ಣನ ಬಾಯಿಯನ್ನು ನೋಡಿದ ಯಶೋದೆ ದಂಗಾದಳು. ಅದರಲ್ಲಿ ಸ್ಥಾವರ, ಜಂಗಮಾತ್ಮಕ ಬ್ರಹ್ಮಾಂಡವನ್ನು ಅವಳು ಕಂಡಳು. ಆಕಾಶ, ದಶದಿಕ್ಕುಗಳು, ಸಮುದ್ರಗಳು, ದ್ವೀಪಗಳು, ನದಿಗಳು, ಪರ್ವತಗಳಿಂದ ಕೂಡಿದ ಭೂಮಂಡಲ, ಸೂರ್ಯ ಚಂದ್ರರು, ನಕ್ಷತ್ರ, ತ್ರಿಲೋಕಗಳು, ದಶಾವತಾರ, ಸಮಸ್ತ ಜೀವ ಸಂಕುಲವನ್ನೇ ಕಂಡ ಯಶೋದೆ ಮೈಮರೆತು ನಿಂತಳು. "ಅಮ್ಮ.." ಎಂದು ಕೃಷ್ಣ ಕೂಗಿದಾಗಲೇ ಅವಳು ಎಚ್ಚರಗೊಂಡಳು. ಕೃಷ್ಣನ ಬಾಲ್ಯವನ್ನು ಕಾಣುವ ಸೌಭಾಗ್ಯಕ್ಕೂ ಕಾರಣ ಅವಳು ತನ್ನ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದ ಫಲವೇ ಆಗಿದೆ.

ಯಶೋದೆ ಮತ್ತು ನಂದಗೋಪರು ಹಿಂದಿನ ಜನ್ಮದಲ್ಲಿ ಅಷ್ಟವಸುಗಳಾದ ದ್ರೋಣ ಮತ್ತು ಅವನ ಪತ್ನಿ ಧಾರಾದೇವಿಯರಾಗಿದ್ದರು. ಬ್ರಹ್ಮನ ಆಜ್ಞೆಯ ಮೇರೆಗೆ ಅವರು ಭೂಲೋಕದಲ್ಲಿ ಜನಿಸಿಬೇಕೆಂದು ತೀರ್ಮಾನಿಸಿದರು. ಅವರು ಯಾವಾಗಲೂ ಭಗವಂತನ ಮೇಲೆ ಪ್ರೀತಿ ಮೋಹಗಳನ್ನು ಹೊಂದಿರಬೇಕೆಂಬ ಕೋರಿಕೆಯನ್ನು ಬ್ರಹ್ಮನ ಮುಂದೆ ಇಟ್ಟಿದ್ದರು. ಬ್ರಹ್ಮದೇವನು "ಹಾಗೆಯೇ ಆಗಲಿ" ಎಂದು ಹೇಳಿದನು. ಬ್ರಹ್ಮದೇವರ ಮಾತಿನ ಮೇರೆಗೆ ಶ್ರೀಹರಿಯು ದ್ವಾಪರಯುಗದಲ್ಲಿ ವಸುದೇವ ದೇವಕಿಯರ ಮಗನಾಗಿದ್ದರೂ, ದ್ರೋಣ ಮತ್ತು ಧಾರಾದೇವಿಯರು ದ್ವಾಪರಯುಗದಲ್ಲಿ ನಂದಗೋಪ ಮತ್ತು ಯಶೋದೆಯರಾಗಿ ಜನಿಸಿದಾಗ ಶ್ರೀಹರಿಯು ಅವರ ಬಳಿಯಲ್ಲೇ ಬಾಲ್ಯವನ್ನು ಕಳೆದನು.

**ನಳಕೂಬರ ಮತ್ತು ಮಣಿಗ್ರೀವರ ಮುಕ್ತಿ:** ಹಾಲನ್ನು ಕಾಯಿಸಲು ಯಶೋದೆಯು ಒಲೆಯ ಮೇಲಿಟ್ಟಳು. ಅಷ್ಟರಲ್ಲಿ ಆಟವಾಡಲು ಹೋಗಿದ್ದ ಪುಟ್ಟ ಕೃಷ್ಣನು, "ಹಸಿವೆಯಾಗಿದೆ, ಎದೆಹಾಲು ಕೊಡು" ಎಂದು ತಾಯಿಯನ್ನು ಕೇಳಿದನು. ಹಠ ಮಾಡಿದ ಕೃಷ್ಣನಿಗೆ ಹಾಲುಣಿಸಲು ಯಶೋದೆಯು ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡಳು. ಅಷ್ಟರಲ್ಲೇ ಹಾಲು ಉಕ್ಕಿ ನೆಲದ ಮೇಲೆ ಚೆಲ್ಲಿತ್ತು. ಕೃಷ್ಣನಿಂದ ಬಿಡಿಸಿಕೊಂಡ ಯಶೋದೆ ಒಲೆಯ ಹತ್ತಿರ ಹೋದಳು. ಇತ್ತ ಸಿಟ್ಟಿನಿಂದ ಕೃಷ್ಣನು ಅಲ್ಲೇ ಇದ್ದ ಕಡೆಗೋಲಿನಿಂದ ಮಜ್ಜಿಗೆ ಗಡಿಗೆಯನ್ನು ಹೊಡೆದನು. ಅಲ್ಲಿದ್ದ ಮಜ್ಜಿಗೆಯೆಲ್ಲ ಚೆಲ್ಲಿತು. ಕೃಷ್ಣ ಅದರಲ್ಲಿದ್ದ ಬೆಣ್ಣೆಯನ್ನು ತಿಂದು, ಮೈಯಲ್ಲಾ ಬಳಿದುಕೊಂಡನು. ಅಮ್ಮನಿಗೆ ಹೆದರಿ ಅಲ್ಲಿಯೇ ಅವಿತನು.

ಹಾಲಂತೂ ಹೋಯಿತು; ಮಗನಿಗೆ ಎದೆಹಾಲು ಕೊಡಲೆಂದು ಕೃಷ್ಣನಿರುವ ಜಾಗಕ್ಕೆ ಯಶೋದೆ ಬಂದಳು. ಅಲ್ಲಿ ಕೃಷ್ಣನಿರಲಿಲ್ಲ. ಮಜ್ಜಿಗೆ ಮನೆಯ ತುಂಬಾ ಹರಡಿತ್ತು. ಇದೆಲ್ಲಾ ಕೃಷ್ಣನ ತುಂಟಾಟವೇ ಇರಬೇಕೆಂದುಕೊಂಡಳು. ಹೀಗೆಯೇ ಬೇರೆಯ ಗೋಪಿಕಾಸ್ತ್ರೀಯರ ಮನೆಯಲ್ಲೂ ಕೃಷ್ಣನು ತುಂಟಾಟ ಮಾಡುವುದು ನಿಜಸಂಗತಿ ಎಂದುಕೊಂಡು, ಅವಿತುಕೊಂಡಿದ್ದ ಕೃಷ್ಣನನ್ನು ಹುಡುಕಿ, ಒರಳುಗಲ್ಲಿಗೆ ಕಟ್ಟಿ ಹಾಕಿದಳು.

ತಾಯಿ ಅತ್ತ ಸಾಗಿದೊಡನೆ ಕೃಷ್ಣನು ಒರಳುಗಲ್ಲನ್ನು ಎಳೆದುಕೊಂಡು ರಸ್ತೆಗೆ ಬಂದನು. ಹಾಗೆಯೇ ಬರುತ್ತಾ ಮನೆಯ ಮುಂದಿದ್ದ ಎರಡು ವೃಕ್ಷಗಳ ಮಧ್ಯದಿಂದ ಮುಂದೆ ಸಾಗಿದನು. ಆ ಎರಡು ಮರಗಳ ನಡುವಿನಿಂದ ಹಾದುಬಂದ ಒರಳುಗಲ್ಲು ಮರದ ಬುಡಕ್ಕೆ ತಾಗಿತು. ಕೃಷ್ಣನು ರಭಸದಿಂದ ಎಳೆದಾಗ ಆ ಎರಡೂ ವೃಕ್ಷಗಳು ಭಯಂಕರ ಸಪ್ಪಳ ಮಾಡುತ್ತಾ ಬುಡಸಹಿತ ಕಿತ್ತುಬಿದ್ದವು. ಆ ವೃಕ್ಷಗಳಿಂದ ಇಬ್ಬರು ಯಕ್ಷರು ಪ್ರತ್ಯಕ್ಷರಾಗಿ ಕೃಷ್ಣನಿಗೆ ನಮಸ್ಕರಿಸಿ, ತಮ್ಮ ಶಾಪ ವಿಮೋಚನೆ ಮಾಡಿದ್ದಕ್ಕೆ ಸ್ತುತಿಸಿ, ತಮ್ಮ ಲೋಕಕ್ಕೆ ತೆರಳಿದರು. ಅವರು ನಳಕೂಬರ ಮತ್ತು ಮಣಿಗ್ರೀವರೆಂಬ ಯಕ್ಷರು; ನಾರದರ ಶಾಪದ ಫಲವಾಗಿ ವೃಕ್ಷವಾಗಿದ್ದರು. ಇದೀಗ ಕೃಷ್ಣನ ಕೃಪೆಯಿಂದ ಮುಕ್ತಿ ಹೊಂದಿದರು.

ಮರ ಬಿದ್ದ ರಭಸಕ್ಕೆ ನಂದಗೋಕುಲದಲ್ಲಿದ್ದ ಎಲ್ಲರೂ ಅವನ ಬಳಿ ಬಂದರು. ವಿಷಯ ತಿಳಿದ ಯಶೋದೆ ನಂದಗೋಪರೂ ಅಲ್ಲಿಗೆ ಬಂದರು. ತಮ್ಮ ಮಗನ ವಿಚಾರವಾಗಿ, 'ನಮ್ಮ ಮಗ ಸಾಮಾನ್ಯನಲ್ಲ, ಅವನು ದೇವರ ಅವತಾರವೇ ಆಗಿರಬೇಕು' ಎಂದುಕೊಂಡರು. ಅವರು ಅನಂತರ ಒರಳಿಗೆ ಕಟ್ಟಿದ ಹಗ್ಗವನ್ನು ಬಿಚ್ಚಿದರು.

ಒಮ್ಮೆ ಮುದುಕಿಯೊಬ್ಬಳು ಹಣ್ಣು ಮಾರುತ್ತಾ ಯಶೋದೆಯ ಮನೆಯ ಮುಂದೆ ಬಂದಳು. ಕೃಷ್ಣನು ಧಾನ್ಯವನ್ನು ಕೊಟ್ಟು ಹಣ್ಣನ್ನು ಕೇಳಿದನು. ಆ ಅಜ್ಜಿಯು ಕೃಷ್ಣನ ಮೋಹಕ ಮಾತುಗಳಿಗೆ ಮರುಳಾಗಿ ಬುಟ್ಟಿಯಲ್ಲಿದ್ದ ಎಲ್ಲಾ ಹಣ್ಣುಗಳನ್ನು ಕೊಟ್ಟಳು. ಕ್ಷಣಮಾತ್ರದಲ್ಲಿ ಆಕೆಯ ಬುಟ್ಟಿಯಲ್ಲಿ ವಜ್ರ ವೈಢೂರ್ಯಗಳೇ ತುಂಬಿಬಿಟ್ಟವು. ಅಜ್ಜಿಯು ಅದನ್ನು ಹೊರಲಾರದೆ ತೆಗೆದುಕೊಂಡು ಹೋದಳು. ಗೋಕುಲದ ಪ್ರಜೆಗಳಿಗೆ ದಿನದಿನವೂ ಕೃಷ್ಣನ ತುಂಟತನದ ಅನುಭವವಾಗುತ್ತಿತ್ತು.

**ವೃಂದಾವನ ಲೀಲೆ:** ನಂದಗೋಕುಲದಲ್ಲಿ ನಡೆಯುತ್ತಿದ್ದ ವಿಪತ್ತುಗಳ ಸರಮಾಲೆಯನ್ನು ಕಂಡು ಅಲ್ಲಿನ ಜನರು ಭಯಭೀತರಾದರು. ಅವರು ಅವರಲ್ಲೇ ವಿಚಾರವಿನಿಮಯ ಮಾಡಿಕೊಂಡರು. ಅವರಲ್ಲಿ ಹಿರಿಯನಾದ ಮತ್ತು ವೃದ್ಧನಾದ ಉಪನಂದನು, "ಈ ಜಾಗವು ಕ್ಷೇಮವಾಗಿಲ್ಲ. ಆದ್ದರಿಂದ ನಾವೆಲ್ಲರೂ ಪಕ್ಕದಲ್ಲಿನ ವೃಂದಾವನಕ್ಕೆ ಹೋಗೋಣ. ಅದು ಪರ್ವತ ಪ್ರದೇಶದಲ್ಲಿದ್ದು, ಮನೋಹರ ಸ್ಥಳವಾಗಿದೆ. ದನಕರುಗಳಿಗೆ ಸಾಕಷ್ಟು ಮೇವೂ ಸಿಗುತ್ತದೆ. ಸುತ್ತಲೂ ರಮಣೀಯವಾದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಯಮುನಾ ನದಿ ಹರಿಯುತ್ತಿದೆ. ಪವಿತ್ರ ಗೋವರ್ಧನ ಪರ್ವತವೂ ನಮ್ಮ ವಾಸಕ್ಕೆ ಸುಖಕರವಾಗಿರುತ್ತದೆ" ಎಂದನು. ಅವನ ಮಾತಿಗೆ ಎಲ್ಲರೂ ಒಪ್ಪಿಗೆ ಸೂಚಿಸಿದರು. ಗೊತ್ತಾದ ಒಂದು ದಿನ ಎಲ್ಲರೂ ತಮ್ಮ ತಮ್ಮ ಸಾಮಾನುಗಳನ್ನು ಕಟ್ಟಿಕೊಂಡು, ಎತ್ತಿನ ಬಂಡಿಯಲ್ಲಿ ಕುಳಿತು ವೃಂದಾವನಕ್ಕೆ ಬಂದರು. ಅಲ್ಲಿ ತಮಗೆ ಬೇಕಾದ ಹಾಗೆ ವಸತಿಯನ್ನು ಕಟ್ಟಿಕೊಂಡು, ಅಲ್ಲಿನ ಜೀವನಕ್ಕೆ ಹೊಂದಿಕೊಂಡರು.

ಬಲರಾಮಕೃಷ್ಣರು ತಮ್ಮ ಬಾಲ್ಯವನ್ನು ಕಳೆದು ಪ್ರೌಢಾವಸ್ಥೆಗೆ ಬಂದರು. ತಮ್ಮ ಗೆಳೆಯರೊಂದಿಗೆ ದಿನವೂ ಆಕಳು, ಕರು ಹೊಡೆದುಕೊಂಡು ಬೆಟ್ಟದ ತಪ್ಪಲಿಗೆ ಬಂದು, ಅರಣ್ಯವನ್ನೆಲ್ಲಾ ಸುತ್ತಿ ಮನೆಗೆ ಬರುವುದು ಪರಿಪಾಠವಾಯಿತು. ಗೋಕುಲವನ್ನು ಬಿಟ್ಟು ನಂದ–ಉಪನಂದರು ಮತ್ತು ಗೋಕುಲದ ಜನರು ಊರು ಬಿಟ್ಟು ವೃಂದಾವನ ಸೇರಿಕೊಂಡ ಸುದ್ದಿಯನ್ನು ತಿಳಿದು ಕಂಸನು ಅಲ್ಲಿಗೆ ವತ್ಸಕಾಸುರ ಎಂಬ ದೈತ್ಯನನ್ನು ಕರೆಸಿ, ಕೃಷ್ಣನನ್ನು ಕೊಲ್ಲಲು ಕಳುಹಿಸಿದನು. ಆ ವತ್ಸಕಾಸುರನು ದನದ ರೂಪದಲ್ಲಿ ಹಸುವಿನ ಮಂದೆಯನ್ನು ಸೇರಿಕೊಂಡನು. ಇದು ಕೃಷ್ಣನಿಗೆ ತಿಳಿಯಿತು. ಬಲರಾಮನನ್ನು ಕರೆದು, "ಅಣ್ಣಾ, ಯಾವುದೋ ಹೊಸ ದನ ಇಲ್ಲಿಗೆ ಬಂದಿದೆ. ಅದು ಎಷ್ಟೊಂದು ಚೆನ್ನಾಗಿದೆ" ಎಂದು ಅದರ ಹಿಂದುಗಡೆ ಬಂದನು. ಇದೇ ಸರಿಯಾದ ಸಮಯವೆಂದುಕೊಂಡು ದನದ ವೇಷದಲ್ಲಿದ್ದ ವೃತಾಸುರನು ತನ್ನ ಕಾಲಿನಿಂದ ಕೃಷ್ಣನನ್ನು ಒದೆಯಲು ಕಾಲುಗಳನ್ನು ಹಾರಿಸಿದನು. ಕೂಡಲೇ ಕೃಷ್ಣನು ಅದರ ಕಾಲುಗಳನ್ನು ಹಿಡಿದು–ಕೊಂಡು ಗಿರಗಿರನೆ ತಿರುಗಿಸಿ, ನೆಲಕ್ಕೆ ಅಪ್ಪಳಿಸಿದನು. ವತ್ಸಕಾಸುರನು ಅರಣ್ಯವೇ ನಡುಗುವಂತೆ ಕಿರುಚುತ್ತಾ ತನ್ನ ದೈತ್ಯ ರೂಪದಿಂದ ಪ್ರಾಣಬಿಟ್ಟನು.

ನಂತರ ಕಂಸನು ಕಳುಹಿಸಿದ ಬಕಾಸುರನು ಕೃಷ್ಣನನ್ನು ಕೊಲ್ಲಲು ಬಕಪಕ್ಷಿಯ ರೂಪದಲ್ಲಿ ಬಂದನು. ಕೃಷ್ಣನು ಅದರ ಚುಂಚವನ್ನು ಹಿಡಿದು, ಆತನ ದೇಹವನ್ನು ಸೀಳಿದನು. ಬಕಾಸುರನ ತಮ್ಮನಾದ ಅಘಾಸುರನು ಕೃಷ್ಣನನ್ನು ನುಂಗಲು ಹೆಬ್ಬಾವಿನ ರೂಪದಲ್ಲಿ ಬಂದು, ಗೋಪಾಲಕರು ನಡೆದಾಡುವ ದಾರಿಯಲ್ಲಿ ಭೂಮಿ–ಆಗಸದತ್ತೆರಕ್ಕೆ ಬಾಯಿ ತೆರೆದು ಕುಳಿತನು. ಇದನ್ನು ಗಮನಿಸಿದ ಕೃಷ್ಣನು ದನ, ಕರು, ಗೋಪಾಲಕರನ್ನು ತಡೆದು ತಾನೇ ಅವನ ಬಾಯಲ್ಲಿ ಹೊಕ್ಕನು. ಅವನ ದೇಹವನ್ನು ಎರಡಾಗಿ ಸೀಳಿ, ಆತನನ್ನು ಸಂಹರಿಸಿದನು.

ಅಲ್ಲಿಯೇ ಅರಣ್ಯಪ್ರದೇಶದಲ್ಲಿ ತಾಳೆಗಿಡಗಳ ತೋಪಿನಲ್ಲಿದ್ದ ಧೇನುಕನೆಂಬ ದೈತ್ಯ ಮತ್ತು ಆತನ ಪರಿವಾರವನ್ನು ಬಲರಾಮ ಕೃಷ್ಣರು ನಾಶಮಾಡಿ, ಆ ತೋಪಿನಲ್ಲಿದ್ದ ಹಣ್ಣನ್ನು ತಿಂದು ಬೇರೆಯವರೆಲ್ಲ ಅಲ್ಲಿಗೆ ಹೋಗಲು ಆ ಸ್ಥಳವನ್ನು ಮುಕ್ತವಾಗಿಸಿದರು.

**ಕಾಳಿಯ ಮರ್ದನ:** ಎಂದಿನಂತೆ ದನಕಾಯಲು ಹೋಗಿದ್ದ ಗೋಪಾಲಕರಿಗೆ ನೀರಡಿಕೆಯಾಗಿ, ನೀರು ಕುಡಿಯಲು ಯಮುನಾ ನದಿಗೆ ಬಂದರು. ಅಲ್ಲಿನ ನೀರನ್ನು ಕುಡಿದ ಕೆಲವು ಮಂದಿ ಗೋಪಾಲಕರು ಮತ್ತು ದನಕರುಗಳು ಮೂರ್ಛೆಗೊಂಡರು. ಮೂರ್ಛೆಗೊಂಡವರನ್ನು ಎಚ್ಚರಗೊಳಿಸಿದ ಕೃಷ್ಣನು ನದಿಯನ್ನು ಸೂಕ್ಷ್ಮವಾಗಿ ಗಮನಿಸಿದನು. ಅದರಲ್ಲಿ

ನೂರಾರು ಹೆಡೆಗಳುಳ್ಳ ವಿಷಸರ್ಪವು ಸೇರಿಕೊಂಡಿದ್ದುದನ್ನು ಅವನು ಕಂಡನು. ಅದು ನದಿಯನ್ನು ವಿಷಮಯ ವಾಗಿಸಿತ್ತು. ಕಾಳಿಯನು ಗರುಡನ ಭಯದಿಂದಾಗಿ ತನ್ನ ಪರಿವಾರದೊಂದಿಗೆ ಅಲ್ಲಿಗೆ ಬಂದು ಸೇರಿಕೊಂಡಿತ್ತು. ಅದರ ಉಪಟಳದಿಂದ ವೃಂದಾವನವನ್ನು ರಕ್ಷಿಸಬೇಕೆಂದು ಕೃಷ್ಣನು ನಿರ್ಧರಿಸಿದನು.

ಕೃಷ್ಣನು ತುಂಬಿ ಹರಿಯುತ್ತಿದ್ದ ನದಿಗೆ ಧುಮುಕಿದನು. ಅಲ್ಲಿದ್ದ ಗೋಪಾಲಕರು ಊರ ಹಿರಿಯರನ್ನು ಕರೆದುಕೊಂಡು ಬಂದರು. ನದಿಗೆ ಧುಮುಕಿದ ಕೃಷ್ಣನನ್ನು ಕಂಡು ಕಾಳಿಂಗ ಸರ್ಪವು ಬುಸುಗುಡುತ್ತಾ, ವಿಷಕಾರುತ್ತಾ ಮೇಲೆ ಬಂದಿತ್ತು. ಕೃಷ್ಣನನ್ನು ಬಿಗಿಯಾಗಿ ಹಿಡಿದು ಪಾತಾಳಕ್ಕೆ ಕರೆದೊಯ್ದಿತು. ನಂತರ ಕೃಷ್ಣನು ಹೆಡೆಯ ಮೇಲೆ ತನ್ನ ಭಾರವಾದ ಹೆಜ್ಜೆಗಳನ್ನು ಇಡುತ್ತಾ ನರ್ತಿಸತೊಡಗಿದನು. ಕೃಷ್ಣ ಕಾಲ್ತುಳಿತಕ್ಕೆ ಕಾಳಿಂಗಸರ್ಪವು ಬಸವಳಿದು, ಕೃಷ್ಣನಿಗೆ ಶರಣಾಯಿತು. ತನ್ನನ್ನು ಗರುಡನ ಭಯದಿಂದ ಕಾಪಾಡಬೇಕೆಂದು ಕೋರಿತು. ನನ್ನ ಹೆಜ್ಜೆಯ ಗುರುತು ನಿನ್ನ ತಲೆಯ ಮೇಲಿರುವುದರಿಂದ ಗರುಡನು ನಿನ್ನನ್ನು ಏನೂ ಮಾಡುವುದಿಲ್ಲ; ನೀನು ನಿನ್ನ ಸ್ವಂತ ಸ್ಥಳಕ್ಕೆ ಹೊರಡು ಎಂದು ಕೃಷ್ಣನು ಹೇಳಿದನು. ನಂತರ ಕೃಷ್ಣನು ನೀರಿನಿಂದ ಮೇಲೆ ಬಂದನು. ಎಲ್ಲರಿಗೂ ಸಂತಸ ವಾಯಿತು.

**ಗೋಪಿಕಾಸ್ತ್ರೀಯರ ವಸ್ತ್ರಾಪಹರಣ:** ಮದುವೆಯಾಗದ ಕನ್ಯೆಯರು ನಮಗೆ ಉತ್ತಮ ಪತಿ ದೊರೆಯಬೇಕೆಂದು ಕಾತ್ಯಾಯಿನಿ ವ್ರತವನ್ನು ಅಂದಿನ ದಿನಗಳಲ್ಲಿ ಮಾಡುತ್ತಿದ್ದರು. ಗೋಪಿಕಾಸ್ತ್ರಿಯರು ಮಾರ್ಗಶಿರ ಮಾಸದಲ್ಲಿ ಒಂದು ತಿಂಗಳು ಈ ವ್ರತವನ್ನು ಆಚರಿಸುತ್ತಿದ್ದರು. ಎಲ್ಲರೂ ಅರುಣೋದಯಕ್ಕೆ ಎದ್ದು, ಯಮುನೆಯಲ್ಲಿ ಸ್ನಾನ ಮಾಡಿ, ಕಾತ್ಯಾಯಿನಿ ಮೂರ್ತಿಯನ್ನು ಸ್ಥಾಪಿಸಿ, ಅದನ್ನು ಪೂಜಿಸಿ, ನಂದಗೋಪನ ಮಗನಾದ ಕೃಷ್ಣನೇ ತಮಗೆ ಪತಿಯಾಗಬೇಕೆಂದು ಹಂಬಲಿಸಿ ವ್ರತವನ್ನು ಮಾಡುತ್ತಿದ್ದರು. ಅವರು ದಿಗಂಬರರಾಗಿ ಸ್ನಾನ ಮಾಡುತ್ತಿದ್ದರು. ಇದನ್ನೆಲ್ಲ ಗಮನಿಸಿದ ಕೃಷ್ಣನು ಸ್ನಾನ ಮಾಡುವಾಗ ಒಂದು ದಿನ ಅವರ ವಸ್ತ್ರಗಳನ್ನೆಲ್ಲಾ ತೆಗೆದುಕೊಂಡು ಮರದ ಮೇಲಿರಿಸಿ, ತಾನು ಅಲ್ಲೇ ಕುಳಿತನು. ಅವರೆಲ್ಲರೂ ಮೇಲೆ ಬಂದು ನೋಡಿದಾಗ ವಸ್ತ್ರಗಳು ಕಾಣಲಿಲ್ಲ. ಮತ್ತೆ ಪುನಃ ನೀರಿಗಿಳಿದರು. ಸುತ್ತಲೂ ಗಮನಿಸಿದಾಗ ಕೃಷ್ಣನು ನಗುತ್ತಾ ಮರದ ಮೇಲೆ ಕೊಳಲನ್ನು ಊದುತ್ತಿದ್ದನು. ಅವರೆಲ್ಲರೂ ಕೃಷ್ಣನನ್ನು ಗಂಡನಾಗಿ ಪಡೆಯಬೇಕೆಂದು ತೀರ್ಮಾನಿಸಿದ್ದರು. ಮದುವೆಯಾಗದ ಕಾರಣ ಆತನೆದುರು ನಗ್ನರಾಗಿ ಬರಲು ನಾಚಿದರು. ಕೃಷ್ಣನು ಅವರಿಗೆ ಬುದ್ಧಿ ಹೇಳಿ, ಇನ್ನು ಮುಂದೆ ನಗ್ನರಾಗಿ ಸ್ನಾನ ಮಾಡಬಾರದೆಂದು ತಿಳಿಸಿದನು. ನಂತರ ಶರತ್ಕಾಲದ ರಾತ್ರಿಯಲ್ಲಿ ಅವರೊಂದಿಗೆ ರಾಸಕ್ರೀಡೆಯಾಡಿ, ಅವರಿಗೆಲ್ಲಾ ಮುಕ್ತಿಯನ್ನು ಕರುಣಿಸಿದನು.

ಒಮ್ಮೆ ಅರಣ್ಯದಲ್ಲಿದ್ದಾಗ ಗೋಪಾಲಕರಿಗೆ ಹಸಿವಾಯಿತು. ತಂದಿದ್ದ ಆಹಾರಬುತ್ತಿಯು ಖಾಲಿಯಾಗಿತ್ತು. ಅವರೆಲ್ಲರೂ "ಹಸಿವೆಯಾಗುತ್ತಿದೆ, ಏನು ಮಾಡುವುದು" ಎಂದು ಕೃಷ್ಣನನ್ನು ಕೇಳಿದರು. ಅದಕ್ಕೆ ಕೃಷ್ಣನು, "ಅದೋ ಅಲ್ಲಿ ಬ್ರಾಹ್ಮಣರು ಯಜ್ಞ ಮಾಡುತ್ತಿದ್ದಾರೆ. ಅಲ್ಲಿ ತಿನ್ನಲು ಏನಾದರೂ ಸಿಗುವುದು"



ಎಂದನು. ಗೋಪಾಲಕರು ಅಲ್ಲಿಗೆ ತೆರಳಿದರು. ಆಹಾರ ಬೇಡಿ ಬಂದ ಬಾಲಕರಿಗೆ ಮತ್ತು ಕೃಷ್ಣನಿಗೆ ಅದನ್ನು ಕೊಡುವ ಮನಸ್ಸಿದ್ದರೂ, ಆ ಬ್ರಾಹ್ಮಣರು ಕಂಸನ ಭಯದಿಂದಾಗಿ, "ಯಜ್ಞಕಾರ್ಯ ಇನ್ನೂ ಮುಗಿದಿಲ್ಲ, ನೀವೆಲ್ಲರೂ ಇಲ್ಲಿಂದ ಕೂಡಲೇ ಹೊರಡಿ" ಎಂದು ಗದರಿಸಿ ಕಳುಹಿಸಿದರು.

ಸಪ್ಪೆ ಮೋರೆ ಹಾಕಿಕೊಂಡು ಬಂದ ಗೋಪಾಲಕರನ್ನು ಕಂಡ ಕೃಷ್ಣನು, "ನೀವು ಬ್ರಾಹ್ಮಣರನ್ನು ಕೇಳಬಾರದಿತ್ತು. ಹಿಂದುಗಡೆ ಬ್ರಾಹ್ಮಣ ಸ್ತ್ರೀಯರಿದ್ದಾರೆ. ಅವರ ಬಳಿ ಹೋಗಿ ಕೇಳಿರಿ" ಎಂದು ಹೇಳಿದನು. ಅಂತೆಯೇ ಅವರು ಅಲ್ಲಿಗೆ ಹೋಗಿ ಬ್ರಾಹ್ಮಣ ಸ್ತ್ರೀಯರನ್ನು ಕೇಳಿದಾಗ ಅವರೆಲ್ಲರೂ ಆಗತಾನೇ ತಯಾರಿಸಿದ್ದ ಬಿಸಿ ಬಿಸಿಯಾದ ಅಡುಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬಂದು, ಕೃಷ್ಣನಿಗೆ ಮತ್ತು ಉಳಿದ ಗೋಪಾಲಕರಿಗೆ ಉಣಬಡಿಸಿದರು. ಅನಂತರ ಅವರೆಲ್ಲರೂ ಹಿಂತಿರುಗಿ ಹೋದರು. ಕೃಷ್ಣನು ಬ್ರಾಹ್ಮಣಸ್ತ್ರೀಯ ರೂಪ ತಾಳಿ, ಬ್ರಾಹ್ಮಣರು ನಡೆಸುತ್ತಿದ್ದ ಯಜ್ಞ ಕಾರ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಂಡನು.

**ಕಂಸ ವಧೆ:** ಕಂಸನ ಆಸ್ಥಾನಕ್ಕೆ ಬಂದ ನಾರದರು ಕಂಸನನ್ನು ಕಂಡು, "ಗೋಕುಲದಲ್ಲಿ ಬೆಳೆಯುತ್ತಿರುವ ಕೃಷ್ಣನೇ ನಿನ್ನ ತಂಗಿಯ ಎಂಟನೇ ಮಗು" ಎಂದು ಅವನಿಗೆ ಹೇಳಿದರು. "ಆತನೂ, ಅವನ ಅಣ್ಣನಾದ ಬಲರಾಮ – ಇಬ್ಬರೂ ಬಲಾಢ್ಯರಾಗಿದ್ದಾರೆ. ನೀನು ಕಳುಹಿಸಿಕೊಟ್ಟ ವೀರರೆಲ್ಲಾ ನಾಮಾವಶೇಷರಾದರು" ಎಂದರು. ಅದಕ್ಕೆ ಕಂಸನು, ಆತನನ್ನು ಸಂಹರಿಸಲು ತಾನು ಈಗಲೇ ಹೊರಡುವೆನೆಂದನು. ಅದಕ್ಕೆ